**O.S.No.75/2012 DW.4**

ದಿನಾಂಕಃ-31-03-2022 ರಂದು ಪುನಃ ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

**ಪಾಟೀ ಸವಾಲುಃ-ಶ್ರೀ.ಎಮ್.ಜಿ.ಕೆ ವಕೀಲರಿಂದ ವಾದಿ ಪರವಾಗಿ**

- ನಾನು ಈ ದಾವೆಯಲ್ಲಿ ನನ್ನ ಪರವಾಗಿ ಕೈಪಿಯತ್ ಹಾಜರಪಡಿಸಿದ್ದೇನೆ. ಕೈಪಿಯತ್‌ನಲ್ಲಿ ಮೃತ್ಯುಪತ್ರ ಖೊಟ್ಟಿ ಇದೆ ಅಂತಾ ನಮೂದಿಸಿದ್ದೇನೆ ಎಂದರೆ ಸರಿ. ವಾದಿಯ ಮತ್ತು ನನ್ನ ನಡುವೆ ದ್ವೇಷ ತಂಟೆ-ತಕರಾರು ಇಲ್ಲ. ಈಗ 34 ವರ್ಷಗಳಿಂದಲೂ ನಾನು ಜಮಖಂಡಿಯಲ್ಲಿ ಇದ್ದೇನೆ. ಶಾಂತಾಬಾಯಿ ಇವರನ್ನು ಆಗಾಗ ನಾನು ಭೇಟಿಯಾಗುವ ಸಂದರ್ಭಗಳು ಇತ್ತು. ಈ ದಾವೆಯಲ್ಲಿನ ಮೃತ್ಯುಪತ್ರದ ಬಗ್ಗೆ ನಾನು ಮತ್ತು ಶಾಂತಾಬಾಯಿಯವರು ಭೇಟಿಯಾದಾಗ ವಿಷಯ ಪ್ರಸ್ತಾಪ ಮಾಡುವ ಯಾವುದೇ ಸಂದರ್ಭ ಇರಲಿಲ್ಲ. ಶಾಂತಾಬಾಯಿಯವರು ಇಸ್ಲಾಂಪೂರದಲ್ಲಿ ಮೈತವಾಗಿದ್ದಾರೆ. ಅವರು

ಇಸ್ಲಾಂಪೂರದಲ್ಲಿರುವ ಡಾ-ರಮಣ್ ಶಹಾ ಅಂದರೆ ಶಾಂತಾಬಾಯಿಯವರ ತಮ್ಮನಾಗಬೇಕು ಅವರ ಮನೆಯಲ್ಲಿ ಮೈತವಾಗಿದ್ದರು. ರಮಣ್ ಶಹಾ ವೃತ್ತಿಯಿಂದ ವೈದ್ಯರು. ಶಾಂತಾಬಾಯಿಯವರ ಆರೋಗ್ಯದ ಬಗ್ಗೆ ಡಾಕ್ಟರ ರಮಣ್ ಶಹಾರವರೇ ಕಾಳಜಿ ವಹಿಸುತ್ತಿದ್ದರು. ಡಾಕ್ಟರ ದಡ್ಡಿ ಮತ್ತು ಡಾಕ್ಟರ ಪರಾಂಜಪೆ ಎನ್ನುವವರ ಕಡೆಯಿಂದ ಶಾಂತಾಬಾಯಿಯವರು ಜಮಖಂಡಿಯಲ್ಲಿದ್ದಾಗ ಚಿಕಿತ್ಸೆ ಪಡೆಯುತ್ತಿದ್ದರು. ಸಾಕ್ಷಿ ಈಗ ನಿಡಿ-3 ದಾಖಲೆಯನ್ನು ನೋಡಿ ಅದರಲ್ಲಿ ಶಾಂತಾಬಾಯಿಯವರ ಸಹಿ ಅಲ್ಲ ಎಂದು ಹೇಳುತ್ತಾರೆ. ಅದು ಖೊಟ್ಟಿ ಸಹಿ ಅಂತಾ ಹೇಳುತ್ತಾರೆ. ಶಾಂತಾಬಾಯಿಯವರಿಗೆ ಮೃತ್ಯುಪತ್ರ ಬರೆದುಕೊಡುವ ಇಚ್ಛೆ ಇರಲಿಲ್ಲ. 2011 ರಲ್ಲಿ ಶಾಂತಾಬಾಯಿಯವರು ಮೃತರಾಗಿದ್ದಾರೆ. ಮೇ-2011 ರಂದು ನಾನು ಶಾಂತಾಬಾಯಿಯವರನ್ನು ಜಮಖಂಡಿಯಲ್ಲಿ ಭೇಟಿಯಾಗಿದ್ದೇನೆ. ನಾನು ಕೈಫಿಯತ್‌ದಲ್ಲಿ ವಂಶಾವಳಿ ತೋರಿಸಿದ್ದು ಅದರಲ್ಲಿ ರೂಪಚಂದರವರ ಸಂಬಂಧಿ ಅಂತಾ ತೋರಿಸಿದ್ದೇನೆ. ರೂಪಚಂದ ಇವರ ಮಗ ದಿವಾಕರ. ಸದರಿ ದಿವಾಕರ ಇವರು ತೀರಿಕೊಂಡಿದ್ದಾರೆ. ದಿವಾಕರಗೆ ಯಾವುದೇ ಮಕ್ಕಳು ಇರಲಿಲ್ಲ. ನಾನು ದಿವಾಕರವರ ಹೆಂಡತಿ ಆಗಿದ್ದು ವಾರಸುದಾರರು ಅಂತಾ ಹಕ್ಕನ್ನು ಸಾಧನೆ ಮಾಡುತ್ತಿದ್ದೇನೆ. ನನ್ನ ಕೈಫಿಯತ್‌ನಲ್ಲಿ ನಮ್ಮದು ಏಕತ್ರಗ್ರಾಣಿ ಅಂತಾ ಹೇಳಿದ್ದು, ರೂಪಚಂದ, ಬಾಲಚಂದ್ರ, ಶಾಂತಿಲಾಲ ಒಟ್ಟಿಗೆ ಇದ್ದರು ಅಂತಾ ಹೇಳಿದ್ದು ಸುಳ್ಳು ಇದೆ, 1961 ರಲ್ಲಿ 3 ಜನ ನೊಂದಾಯಿತ ವಾಟ್ನಿ ಪ್ರಕಾರ ಬೇರೆ ಆಗಿದ್ದಾರೆ ಎಂದರೆ ಸರಿಯಲ್ಲ. 2 ನೇ ದರ್ಜೆ ವಾರಸುದಾರಳು ಅಂತಾ ಸಾಧನೆ ಮಾಡುತ್ತಿದ್ದು ನಾನು 2 ನೇ ವಾರಸುದಾರಳು ಅಂತಾ ಸುಳ್ಳು ಸಾಧನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ-ಶ್ರೀ.ಡಿ.ಆಯ್.ಕೆ ವಕೀಲರಿಂದ ಪ್ರತಿವಾದಿ-1 ಪರವಾಗಿ</u>**

ನಾನು ಎಸ್.ಎಸ್.ಎಲ್.ಸಿ ವರೆಗೆ ಶಾಲೆ ಕಲಿತ್ತಿದ್ದೇನೆ. ಯಡಳ್ಳಿಯ ಐ.ಟಿ.ಐ ಕಾಲೇಜದಲ್ಲಿ ನಾನು ಬೋಧಕೇತರ ನೌಕರಿಯಲ್ಲಿ ಇದ್ದು 1 ನೇ ದರ್ಜೆಯ ಸಹಾಯಕಿ ಅಂತಾ ಕಾರ್ಯನಿರ್ವಹಿಸುತ್ತಿದ್ದೇನೆ. ನನ್ನ ಲಗ್ನ 1989 ರಲ್ಲಿ ಆಗಿದೆ. ನನ್ನ ಮತ್ತು ದಿವಾಕರರವರ ವೈವಾಹಿಕ ಜೀವನದಲ್ಲಿ ಯಾವುದೇ ಸಂತಾನ ಇಲ್ಲ. ತಕರಾರಿನಲ್ಲಿ ಮಾಹಿತಿ ಬರೆಯಲು

ಸಮಾಜದವರು ಕೊಟ್ಟಿದ್ದಾರೆ. ಮಾಣಿಕಚಂದ ಇವರಿಗೆ 4 ಜನ ಮಕ್ಕಳು. ಸದರಿಯವರ 4 ಜನ ಮಕ್ಕಳ ಪೈಕಿ ಬಾಳು ಅಂತಾ ಮಗನಿದ್ದು ಅವಿವಾಹಿತರಾಗಿ ಮೈತವಾಗಿದ್ದಾರೆ. ಹೆಣ್ಣುಮಕ್ಕಳು 4 ಜನ ಇದ್ದರು. ನನ್ನ ಮಾವ ರೂಪಚಂದ ಅವರಿಗೆ ಇಬ್ಬರು ಗಂಡು ಮಕ್ಕಳಿದ್ದು, ನನ್ನ ಗಂಡ ದಿವಾಕರ ಶಹಾ ಆತನ ಸಹೋದರ ರವೀಂದ್ರ. ರವೀಂದ್ರ ಅವಿವಾಹಿತರಾಗಿ ಮೃತರಾದ್ದರು. ರೂಪಚಂದ ಇವರಿಗೆ 4 ಜನ ಹೆಣ್ಣುಮಕ್ಕಳು. ಶಶಿಕಲಾ, ಕುಮುದಿನಿ, ಸುಚಿತಾ @ ಬೇಬಿ, ಕಮಲಬೇನ ಅಂತಾ ಹೆಣ್ಣುಮಕ್ಕಳು. ಕೈಫಿಯತ್ ಸಲ್ಲಿಸುವ ಕಾಲಕ್ಕೆ ವಕೀಲರಿಗೆ ಈ ಎಲ್ಲಾ ವಿಷಯಗಳನ್ನು ನಾನು ಹೇಳಿದ್ದೇನೆ. ಆದರೆ ವಂಶಾವಳಿಯಲ್ಲಿ ಈ ಎಲ್ಲಾ ಅಂಶಗಳನ್ನು ಕಾಣಿಸಿಲ್ಲ. ಪ್ರತಿವಾದಿ ಪತ್ರವನ್ನು ತಯಾರಿಸಿದ ನಂತರ ವಕೀಲರು ಓದಿ ಹೇಳಿದ್ದಾರೆ. ನಾನು ಓದಿ ತಿಳಿದುಕೊಂಡ ನಂತರ ಸಹಿ ಮಾಡಿದ್ದೇನೆ. ಸಾಕ್ಷಿ ತಾವು ಸಲ್ಲಿಸಿದ ಕೈಫಿಯತ್ ನೋಡಿ ಗುರುತಿಸುತ್ತಾರೆ. ಕೈಫಿಯತನಲ್ಲಿ 4 ಜನ ಹೆಣ್ಣುಮಕ್ಕಳ ಹೆಸರನ್ನು ನಮೂದಿಸಲು ಯಾವುದೇ ತೊಂದರೆ ಇರಲಿಲ್ಲ.

2. ಶಾಂತಾಬಾಯಿ ಇವರು ಮುನಿಸಿಪಾಟಿ ಎದುರುಗಡೆ ಇರುವ ಮನೆಯಲ್ಲಿ ವಾಸ ಇದ್ದರು. ಶಾಂತಾಬಾಯಿ ಮತ್ತು ದಿವಾಕರ ನಡುವೆ ಸಂಬಂಧ ಚೆನ್ನಾಗಿ ಇತ್ತು. 2001 ರಲ್ಲಿ ದಿವಾಕರರವರು ಮೈತವಾಗಿದ್ದಾರೆ. ದಿವಾಕರರವರ ಮರಣಾನಂತರ ಒಬ್ಬರಿಗೊಬ್ಬರು ಭೇಟಿಯಾಗುವ ಮತ್ತು ಒಬ್ಬರ ಮನೆಗೆ ಇನ್ನೊಬ್ಬರು ಹೋಗುವ ಸಂದರ್ಭ ಇತ್ತು. ಶಾಂತಾಬಾಯಿಯವರ ತವರು ಮನೆಯವರು, ಅವರ ಕುಟುಂಬದ ಸದಸ್ಯರ ಪರಿಚಯ ನನಗೆ ಇದೆ. ಜೈನ ಮಂದಿರಕ್ಕೆ ಹೋಗುವಾಗ, ಹಬ್ಬ ಹರಿದಿನಗಳಂದು ಭೇಟಿಯಾಗುತ್ತಿದ್ದೆನು. ಶಾಂತಾಬಾಯಿ ಇವರು ಯಾವತ್ತು ಹಾಸಿಗೆ ಹಿಡಿದಿರಲಿಲ್ಲ. ಆಗಾಗ ಅನಾರೋಗ್ಯಗಳಿಗೆ ದವಾಖಾನೆಗೆ ತೋರಿಸುತ್ತಿದ್ದರು. ಶಾಂತಾಬಾಯಿಯವರು ದಡ್ಡಿ ಮತ್ತು ಪರಾಂಜಪೆ ಡಾಕ್ಟರಗಳಿಗೆ ತೋರಿಸುತ್ತಿದ್ದರು. ಇಸ್ಲಾಂಪೂರದಲ್ಲಿ ಡಾ-ಉಮರಾಣಿ ಎನ್ನುವವರ ಬಳಿ ಶಾಂತಾಬಾಯಿಯವರು ತೋರಿಸಿದ್ದರು. ಬ್ಯಾಂಕರನಲ್ಲಿ ಇರುವ ಲಾಕರದಲ್ಲಿ ಇರುವ ಕಾಗದ ಪತ್ರಗಳನ್ನು ಹಾಜರಪಡಿಸುವ

ಕುರಿತು ನ್ಯಾಯಾಲಯದ ನಿಯೋಗಿ ನನಗೂ ಸಹ ತಿಳುವಳಿಕೆ ಕೊಟ್ಟಿದ್ದ ಎಂದರೆ ಸರಿ. ನ್ಯಾಯಾಲಯದ ನಿಯೋಗಿ ಬ್ಯಾಂಕಿನ ಲಾಕರ್ ತೆಗೆದು ಅದರಲ್ಲಿರುವ ಕಾಗದ ಪತ್ರಗಳನ್ನು ತೆಗೆಯುವ ಕಾಲಕ್ಕೆ ನಾನು ಸಹಿತ ಹಾಜರ ಇದ್ದೆನು. ನಾನು ಲಾಕರನಿಂದ ಕಾಗದ ಪತ್ರಗಳನ್ನು ತೆಗೆಯುವ ಪ್ರಕ್ರಿಯೇ ನಡೆಯುತ್ತಿರುವಾಗ ಹಾಜರ ಇದ್ದೆನು, ಆದರೆ ಏನೇನು ಕಾಗದ ಪತ್ರಗಳನ್ನು ತೆಗೆದರು ಅಂತಾ ನನಗೆ ಗೊತ್ತಿಲ್ಲ. ನ್ಯಾಯಾಲಯದ ನಿಯೋಗಿ ಲಾಕರನಲ್ಲಿ ಇದ್ದ ಎಲ್ಲಾ ಕಾಗದ ಪತ್ರಗಳು ಮತ್ತು ಬೆಲೆ ಬಾಳುವ ವಸ್ತುಗಳನ್ನು ಸಹಿತ ತೋರಿಸಿದ್ದರು ಎಂದರೆ ಸರಿ. ಶಾಂತಾಬಾಯಿ ಇವರು ಮಾಡುವ ಪ್ರತಿಯೊಂದು ವ್ಯವಹಾರದ ಬಗ್ಗೆ ನನ್ನ ಜೊತೆಗೆ ಸಮಾಲೋಚಣೆ ಮಾಡುತ್ತಿರಲಿಲ್ಲ. ಜಮಖಂಡಿಯಲ್ಲಿ ವಾಸ ಇರುವ ಸುಜೀತ ಶಹಾ ಬಳಿ ತಮ್ಮ ಕಾಗದ ಪತ್ರಗಳನ್ನು ಬರೆಸುತ್ತಿದ್ದರು. ಅವರು ಇಲ್ಲ ಎಂದಾಗ ನಾನು ಕಾಗದ ಪತ್ರಗಳನ್ನು ನಾನು ಬರೆದುಕೊಡುತ್ತಿದ್ದೆನು. ಶಾಂತಾಬಾಯಿಯವರು ಜೀವಂತ ಇರುವಾಗ ಜಮಖಂಡಿಗೆ ಅವರ ಸಹೋದರಿ ಲಲಿತಾಕುಮಾರಿ ಬಂದು ಹೋಗಿ ಮಾಡುತ್ತಿದ್ದರು. ಡಾ-ರಮಣ ಸಹ ಸಹೋದರರ ಪೈಕಿ ಆಗಾಗ ಬಂದು ಭೇಟಿಯಾಗಿ ಹೋಗುತ್ತಿದ್ದರು. ಪ್ರತಿವಾದಿ-1 ಶಾಂತಾಬಾಯಿಯವರ ತಂಗಿ ಲಲಿತಾಕುಮಾರಿ ಇವರ ಮಗ. 1 ನೇ ಪ್ರತಿವಾದಿ ಸಹ ಶಾಂತಾಬಾಯಿಯವರ ಮನೆಗೆ ಹೋಗುವುದು ಬರುವುದು ಮಾಡುತ್ತಿದ್ದನು. ಮಾಣಿಕಚಂದ ಅವರ ಮರಣಾನಂತರ ಅವರ ಎಲ್ಲಾ ಗಂಡು ಮಕ್ಕಳು ನೊಂದ ವಾಟ್ನಿ ಪತ್ರದ ಮೂಲಕ ವಾಟ್ನಿ ಮಾಡಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಒಬ್ಬ ಮಗ ಮತ್ತು 4 ಜನ ಹೆಣ್ಣುಮಕ್ಕಳು ನನ್ನ ಜೊತೆಗೆ ವಾರಸುದಾರರು ಆಗುತ್ತಾರೆ ಎಂದರೆ ಸಾಕ್ಷಿ ನಾವು ಅವರಿಗೆ ಹೇಳಿದ್ದೆವು ಎಂದು ಹೇಳುತ್ತಾರೆ. ಅದೇ ರೀತಿ ಮಾಣಿಕಚಂದ ಅವರ 4 ಜನ ಹೆಣ್ಣುಮಕ್ಕಳು ಸಹ ವಾರಸುದಾರರು ಎಂದರೆ ಇರಬಹುದು. ಶಾಂತಾಬಾಯಿ ಇವರು ಮರಾಠಿ ಭಾಷೆಯಲ್ಲಿ ಸಹಿ ಮಾಡುತ್ತಿದ್ದರು. ಸಾಕ್ಷಿಗೆ ಮೊದಲು ಮೃತ್ಯುಪತ್ರದ ಝುರಾಕ್ಸ ಪ್ರತಿ ತೋರಿಸಿದ್ದು ಶಾಂತಾಬಾಯಿಯವರ ಸಹಿ ಗುರುತಿಸಿದ್ದು ಅದರ ಮೂಲ ಪ್ರತಿ ನಿಡಿ-3 ನ್ನು ತೋರಿಸಿದಾಗ ಅದರಲ್ಲಿರುವ ಸಹಿಯಲ್ಲಿ ಒಂದೆರಡು ಅಕ್ಷರಗಳು ವ್ಯತ್ಯಾಸ ಕಂಡು ಬರುತ್ತವೆ ಎಂದು ಹೇಳುತ್ತಾರೆ.

3. ಶಾಂತಾಬಾಯಿಯವರು ಮೃತರಾಗುವ ಮೊದಲು ಮೃತ್ಯುಪತ್ರ ಬರೆಸಿದ್ದು ಅದು ನಿಡಿ-3 ಎಂದರೆ ನನಗೆ ಗೊತ್ತಿಲ್ಲ. ನಿಡಿ-3 ರ ಪ್ರತಿಯನ್ನು ಪಡೆದು ಓದಿ ತಿಳಿದುಕೊಳ್ಳುವ ಪ್ರಯತ್ನ ಮಾಡಿದ್ದಾಗಲೀ ಅಥವಾ ವಕೀಲರಿಗೆ ತೋರಿಸಿ ಓದಿಸಿ ತಿಳಿದುಕೊಳ್ಳುವ ಪ್ರಯತ್ನ ಮಾಡಿಲ್ಲ. ನಾನು ವಕೀಲರ ಮೂಲಕ ಈ ಕೇಸಿನಲ್ಲಿ ಹಾಜರಾದ ನಂತರ ನನ್ನ ಕೈಫಿಯತ ಸಲ್ಲಿಸಿದ್ದು ಅದಾದ ಮೇಲೆ ಈ ದಾವೆಯಲ್ಲಿನ ದಾಖಲಾತಿಗಳನ್ನು ತೆಗೆಯಿಸಿ ನೋಡುವ ಪ್ರಯತ್ನ ಮಾಡಿಲ್ಲ. ಬಾಲಚಂದ್ರರವರು ಕಾರ್ಪೋರೇಶನ ಬ್ಯಾಂಕಿಗೆ ಒಂದು ಪತ್ರ ಬರೆದಿದ್ದು ಅದು ನನಗೆ ಗೊತ್ತಿಲ್ಲ. ವಾದಿಗೆ ಸಹಾಯ ಮಾಡಲು ಕೈಫಿಯತ್ ಮತ್ತು ಪ್ರಮಾಣ ಪತ್ರದಲ್ಲಿ ಮೃತ್ಯುಪತ್ರವನ್ನು ಖೊಟ್ಟಿಯಾಗಿ ಸೃಷ್ಟಿಸಿಕೊಂಡಿದ್ದಾರೆ ಎಂದು ಸುಳ್ಳು ಬರೆಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿ ರುವರು.

ಸಹಿ/-

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಜಮಖಂಡಿ

ಸಾಕ್ಷಿಯ ಸಹಿ